1) ತೋಟಗಾರಿಕೆ ಬೆಳೆಗಳ ಸಂಶೋಧನೆ ಬಗ್ಗೆ ಕೇಂದ್ರೀಕೃತ ಗಮನ ಹರಿಸಲು ಸಾಧ್ಯವಾಗುವುದಿಲ್ಲ.

2) ಸದರಿ ಬೆಳೆಗಳಿಗೆ ಆಧ್ಯತೆ ಮೇರೆಗೆ ಅನುದಾನ ಒದಗಿಸಲು ಸಾಧ್ಯವಾಗುವುದಿಲ್ಲ.

3) ಪ್ರತ್ಯೇಕವಾಗಿ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ ಸ್ಥಾಪನೆಗೊಂಡಿರುವುದರಿಂದ ಆಡಳಿತಾತ್ಮಕವಾಗಿ ಕಾರ್ಯನಿರ್ವಹಿಸುವಲ್ಲಿ ಅನಾನುಕೂಲವಾಗುತ್ತದೆ.

ಭೂಚೇತನ ಮಾರ್ಗಸೂಚಿ

1000 (1109) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಜಾರಿಗೆ ತಂದಿರುವ ಭೂಚೇತನ ಕಾರ್ಯಕ್ರಮದ ಮಾರ್ಗಸೂಚಿಯ ವರದಿಯು ಸಿದ್ದವಿದೆಯೇ;

ಆ) ಈ ಯೋಜನೆಗಾಗಿ ಎಷ್ಟು ಜಿಲ್ಲೆಗಳ ಜಮೀನುಗಳನ್ನು ಒಳಪಡಿಸಲು ಉದ್ದೇಶಿಸಲಾಗಿದೆ; ರಾಜ್ಯಾದ್ಯಂತ ಈ ಕಾರ್ಯಕ್ರಮವನ್ನು ಎಂದು ಸಂಪೂರ್ಣವಾಗಿ ಅನುಷ್ಠಾನಗೊಳಿಸಲಾಗುವುದು?

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು) :

ಅ) ಸರ್ಕಾರವು ಜಾರಿಗೆ ತಂದಿರುವ ಭೂಚೇತನ ಕಾರ್ಯಕ್ರಮದ ಮಾರ್ಗಸೂಚಿಯ ವರದಿಯು ಸಿದ್ದವಿದೆ.

ಆ) ಈ ಯೋಜನೆಗಾಗಿ 24 ಜಿಲ್ಲೆಗಳ ಖುಷ್ಕಿ ಜಮೀನುಗಳನ್ನು ಒಳಪಡಿಸಲು ಉದ್ದೇಶಿಸಲಾಗಿದೆ. ರಾಜ್ಯಾದ್ಯಂತ ಈ ಕಾರ್ಯಕ್ರಮವನ್ನು 2012–13ಕ್ಕೆ ಸಂಪೂರ್ಣವಾಗಿ ಅನುಷ್ಠಾನಗೊಳಿಸಲಾಗುವುದು.

1002 (1111) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕ ವಿತರಣೆ ವ್ಯವಸ್ಥೆಯಡಿಯಲ್ಲಿ "ಅಕ್ಕಿ ಸಂತೆ" ಗಳ ಮೂಲಕ ಎಷ್ಟು ಪ್ರಮಾಣದ ಅಕ್ಕಿಯನ್ನು ಯಾವ ದರದಲ್ಲಿ ವಿತರಿಸಲಾಗಿದೆ;

ಯಾವ್ಯಾವ ಸ್ಥಳಗಳಲ್ಲಿ ವಿತರಿಸಲಾಗಿದೆ;

ಆ) ವಿತರಣೆಯ ವ್ಯವಸ್ಥೆಯನ್ನು ದೋಷರಹಿತವನ್ನಾಗಿಸಲು ಇದುವರೆವಿಗೂ ಎಷ್ಟು ಬಯೋಮೆಟ್ರಿಕ್ ಸಾಧನಗಳನ್ನು ವಿತರಿಸಲಾಗಿದೆ?

ಶ್ರೀ ಹೆಚ್. ಹಾಲಪ್ಪ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವರು) :

ಅ) ಸಾರ್ವಜನಿಕ ವಿತರಣೆ ವ್ಯವಸ್ಥೆಯಡಿಯಲ್ಲಿ "ಅಕ್ಕಿ ಸಂತೆ" ಕಾರ್ಯಕ್ರಮವನ್ನು ನಡೆಸಿರುವುದಿಲ್ಲ.

ಗ್ರಾಹಕರಿಗೆ ಕಡಿಮೆ ಬೆಲೆಯಲ್ಲಿ ಅಕ್ಕಿ ವಿತರಿಸುವ ಉದ್ದೇಶದಿಂದ ಅಕ್ಕಿಸಂತೆಯನ್ನು ಆಯೋಜಿಸಲಾಯಿತು. ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಕರ್ನಾಟಕ ರಾಜ್ಯ ಗ್ರಾಹಕರ ಸಹಕಾರಿ ಮಹಾ ಮಂಡಳಿ ನಿಯಮಿತ ಹಾಗೂ ಅಕ್ಕಿ ಗಿರಣಿ ಮಾಲೀಕರ ಸಹಯೋಗದೊಂದಿಗೆ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿರುತ್ತದೆ. ಅಕ್ಕಿ ಗಿರಣಿ ಮಾಲೀಕರು ನೇರವಾಗಿ ಅಕ್ಕಿಯನ್ನು ಜನತಾ ಬಜಾರ್‌ಗಳಿಗೆ ಸರಬರಾಜು ಮಾಡಿ ಮಧ್ಯವರ್ತಿಗಳ ಹಾವಳಿ ಇಲ್ಲದೇ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಮಾರಾಟ ಮಾಡುವ ಪ್ರಯತ್ನ ಮಾಡಲಾಗಿದೆ.

ಇದರ ಮೂಲಕ ವಿತರಣೆಯಾದ ವಿವಿಧ ಮಾದರಿಯ ಅಕ್ಕಿಯ ಮಾರಾಟದ ವಿವರ ಈ ಕೆಳಗಿನಂತಿರುತ್ತದೆ.

1) 1 ಕೆಜಿ ಅಕ್ಕಿ ರೂ.20ರ ಧಾರಣೆ – 799 ಕ್ವಿಂ.
2) 1 ಕೆಜಿ ಅಕ್ಕಿ ರೂ. 25ರ ಧಾರಣೆ – 1267 ಕ್ವಿಂ.
3) 1 ಕೆಜಿ ಅಕ್ಕಿ ರೂ. 28ರ ಧಾರಣೆ – 1580 ಕ್ವಿಂ.

ಒಟ್ಟು 3596 ಕ್ವಿಂ ಅಕ್ಕಿ ಮಾರಾಟವಾಗಿರುತ್ತದೆ.
ಬೆಂಗಳೂರಿನ 7 ಜನತಾ ಬಜಾರ್‌ಗಳಲ್ಲಿ ವಿತರಿಸಲಾಗಿದೆ.

1) ಕೆ.ಜಿ. ರಸ್ತೆ, ಏಷಿಯಾಟೆಕ್ ಬಿಲ್ಡಿಂಗ್, ಬೆಂ.
2) ಜಯನಗರ ಶಾಪಿಂಗ್ ಕಾಂಪ್ಲೆಕ್ಸ್, ಜಯನಗರ, ಬೆಂ.
3) ಸದಾಶಿವನಗರ, ಬೆಂ.
4) ನಂದಿದುರ್ಗ ಸಂ:2, ನಂದಿದುರ್ಗ ರಸ್ತೆ, ಬೆಂ.
5) ಆರ್.ಎಂ.ವಿ. ರಾಜಮಹಲ್ ವಿಲಾಸ್ ಬಡಾವಣೆ, ಬೆಂ.

6) ಬಿ.ಡಿ.ಎ ಕಾಂಪ್ಲೆಕ್ಸ್, 8ನೇ ಮುಖ್ಯ ರಸ್ತೆ, ಬಸವೇಶ್ವರ ನಗರ, ಬೆಂ.

7) ಹೆಚ್.ಎ.ಎಲ್. ಓಲ್ಡ್ ಟೌನ್‌ಶಿಪ್, ವಿಮಾನಪುರ, ಬೆಂ.

ಆ) ಇಲ್ಲ.

ಸಾವಯವ ಕೃಷಿ ಪ್ರಾಧಿಕಾರ

1003 (1124) ಶ್ರೀ ಕೃಷ್ಣಬೈರೇಗೌಡ ಸಿ.ಬಿ. (ಬ್ಯಾಟರಾಯನಪುರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾವಯವ ಕೃಷಿ ಪ್ರಾಧಿಕಾರ ಸ್ಥಾಪನೆ ಯಾದಾಗಿನಿಂದ ಇದುವರೆವಿಗೂ ಪ್ರಾಧಿಕಾರಕ್ಕೆ ಬಿಡುಗಡೆ ಮಾಡಲಾಗಿರುವ ಮೊತ್ತ ಎಷ್ಟು; ಪ್ರಾಧಿಕಾರವು ಈ ಉದ್ದೇಶಕ್ಕಾಗಿ ಎಷ್ಟು ಮೊತ್ತವನ್ನು ಖರ್ಚು ಮಾಡಲಾಗಿದೆ (ತಾಲ್ಲೂಕುವಾರು ವಿವರ ಒದಗಿಸುವುದು);

ಆ) ಈ ಪ್ರಾಧಿಕಾರದ ಆಡಳಿತಕ್ಕೆ ಪದಾಧಿಕಾರಿ ಹಾಗೂ ಸದಸ್ಯರ ಭತ್ಯೆ, ದೂರವಾಣಿ ಇತ್ಯಾದಿ ಸೌಲಭ್ಯಕ್ಕಾದ ವೆಚ್ಚ ಮತ್ತು ಆಡಳಿತಾತ್ಮಕ ವೆಚ್ಚ ಎಷ್ಟು;

ಇ) ಈ ಪ್ರಾಧಿಕಾರದ ಸಿಬ್ಬಂದಿಗಳ ವೇತನಕ್ಕಾಗಿ ಎಷ್ಟು ಮೊತ್ತವನ್ನು ಖರ್ಚು ಮಾಡಲಾಗಿದೆ ಹಾಗೂ ಪ್ರಚಾರ ಮತ್ತು ಇತರೆ ವೆಚ್ಚ ಎಷ್ಟು;

ಈ) ರೈತರ ಸಾವಯವ ಕೃಷಿಗೆ ಪ್ರಾಧಿಕಾರವು ಒದಗಿಸಿರುವ ಹಣ ಎಷ್ಟು (ತಾಲ್ಲೂಕುವಾರು ವಿವರ ಒದಗಿಸುವುದು); ಬಾಕಿ ನೀಡಬೇಕಾದ ಹಣ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು);

ಉ) ಕೆಲವು ತಾಲ್ಲೂಕುಗಳಲ್ಲಿ ಕೆಲವು ಘಟಕಗಳಿಗೆ ಸಹಾಯ ಧನ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಯಾವ ಕಾರಣಕ್ಕಾಗಿ ಸಹಾಯಧನ ನಿಲ್ಲಿಸಲಾಗಿದೆ; ಎಷ್ಟು ದಿನಗಳೊಳಗಾಗಿ ಬಾಕಿ ಇರುವ / ನಿಲ್ಲಿಸಿರುವ ಸಹಾಯಧನ ನೀಡಲಾಗುವುದು?

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು) :

ಅ) ಸಾವಯವ ಕೃಷಿ ಉತ್ತೇಜನಕ್ಕಾಗಿ ಸರ್ಕಾರವು ಯಾವುದೇ ಪ್ರಾಧಿಕಾರದ ರಚನೆ ಮಾಡಿರುವುದಿಲ್ಲ. ಆದರೆ, ರಾಜ್ಯಮಟ್ಟದ ಸಾವಯವ ಕೃಷಿ ಮಿಷನ್ ಅಧಿಕಾರಯುಕ್ತ ಸಮಿತಿಯನ್ನು ಆಗಸ್ಟ್ 2008ರ ಮಾಹೆಯಲ್ಲಿ